ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ
ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

ಸಹಯೋಗ

ಸಂಗಮ ಪ್ರತಿಷ್ಠಾನ (ರಿ), ಹಾಲಹಳ್ಳಿ ಮತ್ತು ಗುಂಡ್ಲುಪೇಟೆ ತಾಲ್ಲೂಕು ವಿವಿಧ ಸಂಘಸಂಸ್ಥೆಗಳು

# ಕುಡಿತ ಬಿಡಿಸುವ ಹನ್ನೊಂದನೆಯ ಉಚಿತ ಶಿಬಿರ
# ಸಮಾರೋಪ

3 ಜನವರಿ 2022 * ಸೋಮವಾರ * ಬೆಳಗ್ಗೆ 11.30
ಜೆಎಸ್‌ಎಸ್ ಅನುಭವ ಮಂಟಪ, ಗುಂಡ್ಲುಪೇಟೆ

**ದಿವ್ಯ ಸಾನ್ನಿಧ್ಯ**
**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ಸಮಾರೋಪ ಭಾಷಣ**
**ಶ್ರೀ ಸಿ.ಎಸ್. ನಿರಂಜನ್‌ಕುಮಾರ್**
ಶಾಸಕರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ

**ಅಧ್ಯಕ್ಷತೆ**
**ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್**
ಅಧ್ಯಕ್ಷರು, ಸಂಗಮ ಪ್ರತಿಷ್ಠಾನ (ರಿ), ಹಾಲಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು

**ಮುಖ್ಯ ಅತಿಥಿ**
**ಶ್ರೀ ಎ. ಹನುಮನರಸಯ್ಯ**
ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು

**ಉಪಸ್ಥಿತರು**
**ಶ್ರೀ ಹೆಚ್.ಎಸ್. ನಂಜಪ್ಪ**
ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ, ತಾಲ್ಲೂಕು ಘಟಕ

**ಶ್ರೀ ಹೆಚ್.ಎಂ. ಮಹದೇವಪ್ಪ**
ಉಪಾಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ, ತಾಲ್ಲೂಕು ಘಟಕ

**ಶ್ರೀ ಕೆ.ಎಸ್. ಮಹೇಶ್**
ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು, ಕಬ್ಬಹಳ್ಳಿ

**ಸರ್ವರಿಗೂ ಸುಸ್ವಾಗತ**

ಒಬ್ಬ ವ್ಯಕ್ತಿ ಮದ್ಯವ್ಯಸನಿಯಾದರೆ ಅನೇಕ ದುಷ್ಪರಿಣಾಮಗಳು ಉಂಟಾಗುತ್ತವೆ. ಅದು ದೈಹಿಕ, ಸಾಮಾಜಿಕ ಮತ್ತು ಮಾನಸಿಕವಾಗಿರಬಹುದು. ಒಬ್ಬ ಸಾಮಾನ್ಯ ವ್ಯಕ್ತಿ ಚಿಂತಿಸುವ ರೀತಿಯಲ್ಲಿ ಮದ್ಯವ್ಯಸನಿ ಚಿಂತಿಸಲಾರ. ದೈಹಿಕ ಸಾಮರ್ಥ್ಯ ಕುಂಠಿತವಾಗುತ್ತದೆ. ಇವರಿಗೆ ನಿದ್ರಾಭಂಗ, ಭ್ರಮಾಧೀನತೆ, ಒತ್ತಡದ ಜೀವನಶೈಲಿ ಪ್ರಾರಂಭವಾಗುತ್ತದೆ. ಅಲ್ಲದೆ ಅಕಾಲಮೃತ್ಯುವೂ ಸಂಭವಿಸಬಹುದು. ಕುಡಿತದಿಂದ ಸಮಾಜದ ಮೇಲಾಗುವ ದುಷ್ಪರಿಣಾಮಗಳಿಗಿಂತ ಕುಟುಂಬದ ಮೇಲಾಗುವ ದುಷ್ಪರಿಣಾಮಗಳೇ ಹೆಚ್ಚು.

ಮದ್ಯವ್ಯಸನದಿಂದ ವ್ಯಕ್ತಿಯ ಮೇಲೆ ಆಗುವ ದುಷ್ಪರಿಣಾಮಗಳು ಒಂದೆರಡಲ್ಲ. ಆತನ ಪಚನಕ್ರಿಯೆ ಹದಗೆಡುತ್ತದೆ. ಅದರ ಪರಿಣಾಮವಾಗಿ ಹುಳಿತೇಗು, ಅಜೀರ್ಣ, ಊಟದಲ್ಲಿ ನಿರಾಸಕ್ತಿ, ರಕ್ತವಾಂತಿ, ಅರೆಪ್ರಜ್ಞಾವಸ್ಥೆ, ಲೈಂಗಿಕ ನಿರಾಸಕ್ತಿ, ದೃಷ್ಟಿದೋಷ, ಹೃದಯ ದೌರ್ಬಲ್ಯ, ಮೂತ್ರಜನಕಾಂಗಗಳ ವೈಫಲ್ಯ, ನಪುಂಸಕತ್ವ, ಕೈಕಾಲಿನ ಮೇಲಿನ ನಿಯಂತ್ರಣ ತಪ್ಪುತ್ತದೆ. ನಡುಕ ಇತ್ಯಾದಿ ತೊಂದರೆಗಳಿಗೆ ತುತ್ತಾಗುವ ಸಂಭವವಿರುತ್ತದೆ.

ಇಂತಹ ಸಮಸ್ಯೆಗಳ ಬಗ್ಗೆ ಮದ್ಯವ್ಯಸನಿಗಳಿಗೆ ಅರಿವು ಮೂಡಿಸಲು 2014 ರಿಂದ ಕುಡಿತ ಬಿಡಿಸುವ ಉಚಿತ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಮೊದಲನೆಯದರಲ್ಲಿ 44, ಎರಡನೆಯದರಲ್ಲಿ 77, ಮೂರನೆಯದರಲ್ಲಿ 66, ನಾಲ್ಕನೆಯದರಲ್ಲಿ 95, ಐದನೆಯದರಲ್ಲಿ 100, ಆರನೆಯದರಲ್ಲಿ 109, ಏಳನೆಯದರಲ್ಲಿ 47, ಎಂಟನೆಯದರಲ್ಲಿ 34, ಒಂಬತ್ತನೆಯದರಲ್ಲಿ 34 ಮತ್ತು ಹತ್ತನೆಯದರಲ್ಲಿ 58 ಹೀಗೆ ಒಟ್ಟು 664 ಮದ್ಯವ್ಯಸನಿಗಳು ಭಾಗವಹಿಸಿ ಅನುಕೂಲ ಪಡೆದಿರುತ್ತಾರೆ.

ಹನ್ನೊಂದನೆಯ ಶಿಬಿರವನ್ನು ಕೋವಿಡ್–19ರ ನಿಯಮಗಳನ್ನು ಅನುಸರಿಸಿ **26 ಡಿಸೆಂಬರ್ 2021 ರಿಂದ 4 ಜನವರಿ 2022 ರವರೆಗೆ ಗುಂಡ್ಲುಪೇಟೆಯ ಜೆಎಸ್‌ಎಸ್ ಅನುಭವ ಮಂಟಪದಲ್ಲಿ** ಏರ್ಪಡಿಸಿದೆ.

ಶಿಬಿರದ ಅವಧಿಯಲ್ಲಿ ಪ್ರತಿದಿನ ವ್ಯಾಯಾಮ, ಧ್ಯಾನ, ಆರೋಗ್ಯ ತಪಾಸಣೆ, ಉಪನ್ಯಾಸ, ವಿಚಾರ ವಿನಿಮಯ ಮತ್ತು ಆಪ್ತಸಮಾಲೋಚನೆ ನಡೆಯುತ್ತಿವೆ.

ಶಿಬಿರಗಳಲ್ಲಿ ಮದ್ಯವ್ಯಸನಿಗಳನ್ನು ವ್ಯಸನಮುಕ್ತರನ್ನಾಗಿ ಮಾಡಿ ಸಮಾಜದ ಮುಖ್ಯವಾಹಿನಿಗೆ ತರುವುದು ಶಿಬಿರದ ಮುಖ್ಯ ಉದ್ದೇಶ. ಮದ್ಯವ್ಯಸನಿಗಳಿಗೆ ಶಿಬಿರದ ನಂತರ ಹೊಸ ಜೀವನಕ್ಕೆ ಬೇಕಾಗುವ ನೆರವನ್ನು ಮೈಸೂರಿನಲ್ಲಿರುವ ಜೆಎಸ್‌ಎಸ್ ಆಪ್ತಸಮಾಲೋಚನಾ ಕೇಂದ್ರದಲ್ಲಿ ಒದಗಿಸಲಾಗುತ್ತದೆ. ಇತರೆಡೆಗಳಿಂದ ಭಾಗವಹಿಸಲು ಅವಕಾಶ ಕಲ್ಪಿಸಿದೆ.

ಮದ್ಯವ್ಯಸನಿಗಳು ಆಪ್ತಸಮಾಲೋಚನೆ ಹಾಗೂ ಮುಂದಿನ ಶಿಬಿರಗಳ ಬಗ್ಗೆ ಮಾಹಿತಿಗಾಗಿ ಡಾ. ಎಂ.ಪಿ. ಸೋಮಶೇಖರ್ ಮತ್ತು ಶ್ರೀ ಎಸ್. ಬಸವರಾಜು ಇವರುಗಳನ್ನು ಕ್ರಮವಾಗಿ 9448653897, 9886476142 ದೂರವಾಣಿಗಳಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.